ಪ್ರಾರಂಭಿಸದೆ ರಾಜ್ಯದ ರೈತರು ಬಿತ್ತನೆ ಬೀಜ ಸಿಗದೆ ಬಹಿರಂಗ ಮಾರುಕಟ್ಟೆಯಲ್ಲಿ ಕಳಪೆ ಬೀಜ ಹೆಚ್ಚಿನ ಬೆಲೆಗೆ ಪಡೆದು ಮೋಸ ಹೋಗುತ್ತಿದ್ದಾರೆ. ಆದ್ದರಿಂದ ರಾಜ್ಯದ ರೈತರಿಗೆ ವಿತರಣೆ ಮಾಡಲು ಯಾವ ಯಾವ ಬಿತ್ತನೆ ಬೀಜ ಎಷ್ಟಿದೆ, ಈಗಾಗಲೇ ಕೃಷಿ ಇಲಾಖೆಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸ್ಟಾಕ್ ಇವೆ, ವಿತರಣೆ ಕೆಲಸ ಕೃಷಿ ಇಲಾಖೆಯ ಮೂಲಕ ಯಾವಾಗ ಪ್ರಾರಂಭಿಸಲಾಗುವುದು ಎಂಬ ವಿಷಯ ತಿಳಿಯಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಬೀಜ ವಿತರಣೆ ಕೆಲಸ ನಡೆಯುತ್ತಿದೆ, ಇಡೀ ಕರ್ನಾಟಕ ರಾಜ್ಯದಲ್ಲಿ ೩,೨೪.೭೦೮ ಕ್ವಿಂಟಾಲ್ ಬೀಜ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಸರ್ಟಿಫೈಡ್ ಸೀಡ್ಸ್ ೮೭ ಸಾವಿರ ಕ್ವಿಂಟಾಲ್ ಬೇಕಾಗಬಹುದು. ಸೀಡ್ ಕಾರ್ಪೊರೇಷನ್‌ನಿಂದ, ಆಯಿಲ್ ಸೀಡ್ ಕಾರ್ಪೊರೇಷನ್‌ನಿಂದ ಮತ್ತು ಬೇರೆ ಬೇರೆ ಖಾಸಗಿ ಸಂಸ್ಥೆಗಳಿಂದ ಹಾಗೂ ಬೀಜ ನಿಗಮದಿಂದ ಈಗಾಗಲೇ ೨ ಲಕ್ಷ ಕ್ವಿಂಟಾಲ್ ಬೀಜ ವಿತರಣೆ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಜೋಳ ೪೮೫ ಕ್ವಿಂಟಾಲ್, ಮುಸುಕಿನ ಜೋಳ ೧೭೦ ಕ್ವಿಂಟಾಲ್, ರಾಗಿ ೨೮೫ ಕ್ವಿಂಟಾಲ್, ಭತ್ತ ೨೬೭೦ ಕ್ವಿಂಟಾಲ್, ಗೋಧಿ ೩೫ ಕ್ವಿಂಟಾಲ್, ದ್ವಿದಳಧಾನ್ಯ ೫೧೦ ಕ್ವಿಂಟಾಲ್ ಸನ್ ಫ್ಲವರ್ ೨೭೫ ಕ್ವಿಂಟಾಲ್, ಸೇಂಗಾ ೩೦೦ ಕ್ವಿಂಟಾಲ್, ಹತ್ತಿ ೩೨೩.೨೫ ಕ್ವಿಂಟಾಲ್ ಬೀಜ ಈಗಾಗಲೇ ಈ ಜಿಲ್ಲೆಯಲ್ಲಿ ದಾಸ್ತಾನು ಮಾಡಲಾಗಿದೆ. ಹಾಗೂ ಈ ವಿಚಾರದಲ್ಲಿ, ಇನ್ನು ಏನಾದರೂ ಸಮಸ್ಯೆ ಬಂದರೆ, ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

೧೨ ತುಮಕೂರು ಜಿಲ್ಲೆಯಲ್ಲಿ ಮುಂಗಾರು ಬಿತ್ತನೆಗೆ ಬೀಜಗಳ ವಿತರಣೆ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಹುವರ್ಷಗಳಿಂದ ಬಾರದೇ ಇದ್ದ ಭರಣಿ ಮಳೆ ಈ ವರ್ಷ ಬಂದು ಮುಂಗಾರು ಬಿತ್ತನೆಗೆ ಅಗತ್ಯ ಮತ್ತು ಲಾಭದಾಯಕವಾದ ಭರಣಿ ಮಳೆ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ಬಂದಿರುತ್ತದೆ. ಆದರೆ ಬಿತ್ತನೆಗೆ ಅಗತ್ಯವಾದ ಜೋಳ, ಹೆಸರು ತೊಗರಿ ಉದ್ದಿನ ಬಿತ್ತನೆ ಬೀಜ ಸಿಗುತ್ತಿಲ್ಲ. ಯಾವುದೇ ಕೃಷಿ ಉಪ ನಿರ್ದೇಶಕರ ಆಫೀಸಿನಲ್ಲಿ ಸಿಗುತ್ತಿಲ್ಲ. ರೈತರು ಬಿತ್ತನೆ ಬೀಜಕ್ಕಾಗಿ ಪರದಾಡುತ್ತಿದ್ದಾರೆ ಆದ್ದರಿಂದ ರೈತರ ಬಿತ್ತನೆ ಬೀಜದ ಅವಶ್ಯಕತೆಯನ್ನು ಆರಿತು ರಾಜ್ಯ ಬೀಜ ನಿಗಮದಿಂದ ಸರ್ಕಾರ ತಕ್ಷಣ ಅವಶ್ಯಕ ವಿವಿಧ ಬಿತ್ತನೆ ಬೀಜಗಳನ್ನು ತಕ್ಷಣ ಭೂಮಿಯ ಹದ ಆರುವ ಮುನ್ನ ಒದಗಿಸಲು ಕ್ರಮ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ತುಮಕೂರು ಜಿಲ್ಲೆಯಲ್ಲಿ ಈ ವರ್ಷ ೧೭ ೧೧೫ ಕ್ವಿಂಟಾಲ್ ಬೀಜ ಬೇಕಾಗಬಹುದು ಎಂದು ಅಂದಾಜು ಮಾಡಿದ್ದೇವೆ. ಇದರ ಪೈಕಿ ಖಿರಾಫ್‌ಗಾಗಿ ೧೪.೭೬೫ ಕ್ವಿಂಟಾಲ್ ಬೀಜ ಬೇಕಾಗಬಹುದು ಎಂದು ಅಂದಾಜು ಮಾಡಿದ್ದೇವೆ. ಆ ಪ್ರಕಾರ ಬೀಜ ನಿಗಮದ ಮೂಲಾಂತರ ೧.೨೭೦ ಕ್ವಿಂಟಾಲ್ ಬೀಜ ದಾಸ್ತಾನು ಆಗಿದೆ ವಿತರಣೆ ಕಾರ್ಯ ನಡೆಯುತ್ತಿದೆ, ಅದೇ ಪ್ರಕಾರ ಬೇರೆ ಬೇರೆ ಖಾಸಗಿ ಸಂಸ್ಥೆಗಳಿಂದ ಈ ಬೀಜದ ಬೇಡಿಕೆಯನ್ನು ಪೂರೈಸುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇನೆ. ಕಾಟನ್ ಸಿ.ಹೆಚ್. ೫ ಸಮಸ್ಯೆ ಇದೆ. ಇದನ್ನು ಒಪ್ಪಿಕೊಳ್ಳುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

೧೩ ಮೈಸೂರಿನಲ್ಲಿರುವ ಕೀರ್ತಿ ಫೈನಾನ್ಸ್‌ನ ಠೇವಣಿದಾರರಿಗೆ ಅನ್ಯಾಯವಾಗಿರುವುದರ ಬಗ್ಗೆ

ಶ್ರೀ ಪಿ.ಎಂ. ಚಿಕ್ಕಬೋರಯ್ಯ. — ಮೈಸೂರಿನ ಕೀರ್ತಿ ಫೈನಾನ್ಸ್ ಠೇವಣಿದಾರರಿಗೆ ವಂಚನೆ ಮಾಡಿದ್ದಾರೆ, ಹಣ ಪಡೆದವರಿಗೆ ಆಸಲೂ ಇಲ್ಲ. ಬಡ್ಡಿಯೂ ಇಲ್ಲ ಎಂಬ ಪರಿಸ್ಥಿತಿ ಒದಗಿದೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಂಡು ಈ ಸಂಸ್ಥೆಯಲ್ಲಿ ಹಣ ತೊಡಗಿಸಿದವರಿಗೆ ಹಣ ವಾಪಸ್ಸು ಕೊಡಿಸಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,— ಮೈಸೂರಿನ ಕೀರ್ತಿ ಫೈನಾನ್ಸ್ ಕಾರ್ಪೊರೇಷನ್‌ನವರು ಎಲ್ಲರಿಂದ ಹಣ ವಸೂಲ್ಮಾಡಿ, ಹಣ ಪಡೆದವರಿಗೆ ಆಸಲೂ ಇಲ್ಲ, ಬಡ್ಡಿಯೂ ಇಲ್ಲ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ನಾನು ಉತ್ತರ ತರಿಸಿ ಕೊಡುತ್ತೇನೆ.

ಅಧ್ಯಕ್ಷರು.— ಈಗ ವಿತ್ತೀಯ ಕಾರ್ಯಕಲಾಪಗಳ ವಿಷಯದಲ್ಲಿ, ಭೂಸಾರ ಜಲ ರಕ್ಷಣೆ ಮತ್ತು ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆಯ ಮೇಲೆ ಚರ್ಚೆ. ಮೊದಲು ಮಾನ್ಯ ಬಿ. ಲಕ್ಕಪ್ಪನವರು ಮಾತನಾಡಲಿ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ ಕ್ರಮಸಂಖ್ಯೆ ೧ ಭೂಸಾರ ಜಲರಕ್ಷಣೆ ವ್ಯವಸಾಯ ಮತ್ತು ವಂತ್ತು ೩ ತೋಟಗಾರಿಕೆ ಬೇಡಿಕೆಗಳ ಮೇಲೆ ಚರ್ಚೆ

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)ಸ.—ನ್ಯಾನ್ಯ ಅಧ್ಯಕ್ಷರೇ, ಈ ದಿನ ಪ್ರಮುಖವಾದ ಬೇಡಿಕೆಯಾದ ವ್ಯವಸಾಯ ಇಲಾಖೆಯ ಮೇಲೆ ಕರ್ನಾಟಕ ರಾಜ್ಯದ ಕೃಷಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅದರಲ್ಲಿರತಕ್ಕಂಥ ನಾನಾ ಲೋಪದೋಷಗಳಿಗಾಗಿ ವಿರೋಧ ಮಾಡುತ್ತಾ ನನ್ನ ಭಾಷಣವನ್ನು ಪ್ರಾರಂಭಿಸುತ್ತಿದ್ದೇನೆ.

ವ್ಯವಸಾಯದ ಪ್ರಾಮುಖ್ಯತೆ ಬಗ್ಗೆ ಹೇಳುವುದಾದರೆ ದಿನಗಟ್ಟಲೆ ಬೇಕಾಗುತ್ತದೆ. ವ್ಯವಸಾಯ ಬಹಳ ಪ್ರಮುಖವಾದ ವೃತ್ತಿ. ಈ ರಾಷ್ಟ್ರದಲ್ಲಿ ಸುಮಾರು ೧೦೦ಕ್ಕೆ ೭೦ ರಷ್ಟು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದಲ್ಲದೆ, ಮಾನವ ಜೀವಂತವಾಗಿ ಬದುಕುವುದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ ಆಹಾರ ಧಾನ್ಯಗಳನ್ನು ಬೆಳೆದು ಸರಬರಾಜು ಮಾಡತಕ್ಕಂಥ ಒಂದು ಪ್ರಮುಖವಾದ ಇಲಾಖೆಯಾಗಿದೆ. ಮಾನವನಿಗೆ ಆಹಾರಧಾನ್ಯಗಳು, ಜಾನುವಾರುಗಳಿಗೆ ಮೇವು ಮತ್ತು ರಾಷ್ಟ್ರದಲ್ಲಿ ಕೈಗಾರಿಕೆಗಳು ಹೆಚ್ಚು ಬೆಳೆದು ವ್ಯಾಪಕವಾಗಿ ರಾಷ್ಟ್ರದ ಸಂಪತ್ತು ಅಭಿವೃದ್ಧಿ ಆಗಬೇಕಾಗಿದ್ದರೂ ಕೂಡಾ ವ್ಯವಸಾಯವೇ ಕಾರಣ. ಕೈಗಾರಿಕೆಗಳಿಗೆ ಅಗತ್ಯವಾಗಿ ಬೇಕಾಗಿರತಕ್ಕಂಥ ಕಚ್ಚಾವಸ್ತುಗಳನ್ನು ಒದಗಿಸತಕ್ಕಂಥ ಒಂದು ಮುಖ್ಯವಾದ ಇಲಾಖೆ ಇದಾಗಿದೆ.

ಆದರೆ ದುರ್ದೈವದಿಂದಾಗಿ ಈ ಒಂದು ಕಸುಬನ್ನು ಅವಲಂಬಿಸಿರತಕ್ಕಂಥ ಜನರ ಸಮಸ್ಯೆಗಳು ಎಷ್ಟು ಎಂದು ನಾವು ಲೆಕ್ಕ ಹಾಕಿ ಹೇಳುವುದಕ್ಕೆ ಸಾಧ್ಯ ಇರದಷ್ಟು ಇವೆ. ಅವುಗಳನ್ನು ನಾನು ಒಂದೊಂದಾಗಿ ಹೇಳುವುದಕ್ಕೆ ಇಚ್ಛಿಸಿದ್ದೇನೆ. ರಾಜ್ಯದಲ್ಲಿ ನಾಲ್ಕು ಕೋಟಿ ಎಪ್ಪತ್ತಾರು ಲಕ್ಷ ಎಕರೆ ಯಷ್ಟು ಭೂಪ್ರದೇಶ ಇದೆ. ಇದರಲ್ಲಿ ಸುಮಾರು ಎರಡುಕೋಟಿ ಅರವತ್ತು ಲಕ್ಷ ಎಕರೆ ಭೂಮಿಯನ್ನು ನಾವು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ. ಎಂದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಭೂ ಪ್ರದೇಶದಲ್ಲಿ ಸುಮಾರು ೫೫ ಪರ್ಸೆಂಟ್‌ನಷ್ಟು ಭೂಮಿಯನ್ನು ನಾವು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ. ಆದರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ವ್ಯವಸಾಯಗಾರರಲ್ಲಿರುವನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಿಲ್ಲ. ಸುಮಾರು ೫೫ ಪರ್ಸೆಂಟ್‌ನಷ್ಟು ಭೂಮಿಯನ್ನು ನಾವು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದರೂ ಕೂಡಾ ಇನ್ನೂ ಸುಮಾರು ೩೯ ಲಕ್ಷ ಎಕರೆಭೂಮಿಯನ್ನು ನಾವು ಹಾಳುಬಿಟ್ಟಿದ್ದೇವೆ. ಈ ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಕೂಡ ಈ ಭೂಮಿಯನ್ನು ಉಪಯೋಗಿಸಿ ಬೆಳೆಯನ್ನು ಬೆಳೆದು ಉತ್ಪಾದನೆ ಮಾಡುವುದರಲ್ಲಾಗಲೀ ಅಥವಾ ಭೂಹೀನ ರೈತರಿಗೆ, ಬಡರೈತರಿಗೆ ಈ ಭೂಮಿಯನ್ನು ಕೊಟ್ಟು ಅವರಿಗೆ ಉದ್ಯೋಗಾವಕಾಶವನ್ನು ಕಲ್ಪನೆ ಮಾಡತಕ್ಕ ಕಾರ್ಯವನ್ನಾಗಲೀ ನಾವು ಇನ್ನೂ ಮಾಡಬೇಕಾಗಿದೆ. ಇರತಕ್ಕಂಥ ಒಟ್ಟು ಪ್ರದೇಶದಲ್ಲಿ ಎಂಟು ಪರ್ಸೆಂಟ್‌ನಷ್ಟು ಭೂಮಿಯನ್ನು ಎಂದರೆ ಮೂವತ್ತೊಂಬತ್ತುಲಕ್ಷ ಎಕರೆ ಭೂಮಿಯನ್ನು ನಾವು ಪಾಳು ಬಿಟ್ಟಿದ್ದೇವೆ. ಈ ಭೂಮಿಯ ಉಪಯೋಗವನ್ನು ಮಾಡಿ ಗ್ರಾಮಾಂತರ ಪ್ರದೇಶದಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸತಕ್ಕ, ಇದರಲ್ಲಿ ಬೆಳೆಯನ್ನು ಬೆಳೆದು ರಾಜ್ಯದಲ್ಲಿ ಆಹಾರಧಾನ್ಯಗಳನ್ನುತ್ಪಾದನೆಯನ್ನು ಅಧಿಕಗೊಳಿಸತಕ್ಕ ಅಥವಾ ಈ ಭೂಮಿಯನ್ನು ಯಾರು ಯಾರು ಭೂಹೀನರಿದ್ದಾರೆ ಅವರಿಗೆ ಇದನ್ನು ಕೊಟ್ಟು ಅಭಿವೃದ್ಧಿ ಪಡಿಸತಕ್ಕಂಥ ಒಂದು ಕೆಲಸ ನಮ್ಮ ರಾಜ್ಯದಲ್ಲಿ ಇನ್ನೂ ಆಗಬೇಕಾಗಿದೆ.

ಈ ರಾಜ್ಯದಲ್ಲಿ ಮೂರು ಕೋಟಿ ಎಪ್ಪತ್ತೈದು ಲಕ್ಷ ಮೂವತ್ತೈದು ಸಾವಿರ ಜನಸಂಖ್ಯೆ ಇದೆ. ಇದರಲ್ಲಿ ಸುಮಾರು ಎಪ್ಪತ್ತು ಪರ್ಸೆಂಟ್‌ನಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿ ಇದ್ದು ಈ ವ್ಯವಸಾಯ